**ನಾಂದಿಪದ**



ಕಲೆ: ಕೌಶಿಕ್

# ಬೆಂಕಿ, ಬೆಳಕು ಮತ್ತು ಬೆರಗು

ಬರವಣಿಗೆಯೇ ಒಂದು ಹೊಣೆಗಾರಿಕೆ ಆಗಿರುವಾಗ, 'ಸಾಮಾಜಿಕ ಜವಾಬ್ದಾರಿ' ಎನ್ನುವುದು ಬರವಣಿಗೆಯ ಅಂತರ್ಗತ ಭಾಗವಾಗಿರುತ್ತದೆ. ಈ ಅರಿವಿನೊಂದಿಗೆಯೇ, ಲೇಖಕನೊಬ್ಬ ನಿರ್ವಹಿಸುವ 'ಸಾಮಾಜಿಕ ಹೊಣೆಗಾರಿಕೆ'ಯನ್ನು ವರ್ತಮಾನ ಬಹು ಎಚ್ಚರದಿಂದ ಗಮನಿಸುತ್ತಿದೆ. ಆ ಕಾರಣದಿಂದಾಗಿ, ಬರವಣಿಗೆಯಲ್ಲಿನ ಸಾಹಿತ್ಯದ ಅಂಶಗಳಿಗಿಂತಲೂ ಆಶಯಗಳೇ ಮುನ್ನೆಲೆಗೆ ಬರುತ್ತಿವೆ, ಚರ್ಚೆಗೆ ಒಳಗಾಗುತ್ತಿವೆ. ಆದರೆ, ಓರ್ವ ಬರಹಗಾರನಿಗೆ ಸಾಮಾಜಿಕ ಹೊಣೆಗಾರಿಕೆ ಇರುವಂತೆ 'ಸಾಹಿತ್ಯಿಕ ಹೊಣೆಗಾರಿಕೆ'ಯೂ ಇರುತ್ತದೆ. ಬರವಣಿಗೆ ಎನ್ನುವುದು ಬದುಕಿನ ಅಗ್ನಿದಿವ್ಯವನ್ನು ಹಾದುಬರುವಂತೆಯೇ, ಸಾಹಿತ್ಯ ಕೌಶಲಗಳೊಂದಿಗಿನ ಅನುಸಂಧಾನವೂ ಆಗಿರುತ್ತದೆ. ಈ ಎರಡೂ ಜವಾಬ್ದಾರಿಗಳ ಯಶಸ್ವೀ ನಿರ್ವಹಣೆಗೊಂದು ಉತ್ತಮ ಉದಾಹರಣೆ ಮೊಗಳ್ಳಿ ಗಣೇಶ್. ವರ್ತಮಾನದ ತಲ್ಲಣಗಳ ಜೊತೆಗೆ ಭಾಷೆ ಹಾಗೂ ಶಿಲ್ಪದ ಕಸುಬುದಾರಿಕೆಯಿಂದಲೂ ಮೊಗಳ್ಳಿ ಅವರ ಕಥನಗಳು ಸಹೃದಯರ ಮನಸ್ಸಿನಲ್ಲಿ ಬೆಳೆಯುವ ಜೀವಬಿತ್ತಗಳಾಗಿವೆ. ಮೊಗಳ್ಳಿ ಅವರ ಬರಹಗಳನ್ನು ಓದಿರುವವರಿಗೆ ಹಾಗೂ ಸಾಹಿತ್ಯದ ವಿದ್ಯಾರ್ಥಿಗಳಿಗೆ, ಅವರ ಬರವಣಿಗೆಯ ಹಿಂದಿನ ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನೆರವಾಗುವ ಅಪರೂಪದ ಸಂದರ್ಶನ ಈ ಸಂಚಿಕೆಯಲ್ಲಿದೆ. 'ಬೆಂಕಿಯನ್ನು ಬೆಳಕಾಗಿಸುವ ಸೃಜನಶೀಲತೆಯು ಭಗ್ನಗೊಂಡೇ ಬರುತ್ತದೆ' ಎನ್ನುವ ಮೊಗಳ್ಳಿ ಅವರ ಮಾತು, ಬದುಕು ಹಾಗೂ ಬರಹವನ್ನು ಅಭಿನ್ನವಾಗಿ ಕಾಣುವ ಎಲ್ಲ ಬರಹಗಾರರ ನಂಬಿಕೆಯೂ ಹೌದು. ಕನ್ನಡ ಸಾಹಿತ್ಯ ಪರಂಪರೆ ಹಾಗೂ ಹೊಸ ತಲೆಮಾರಿನ ಸಾಹಿತ್ಯದ ಕುರಿತ ಅವರ ಅಭಿಪ್ರಾಯಗಳು ಚರ್ಚೆಗೆ ಆಸ್ಪದ ಕಲ್ಪಿಸುವಂತಿವೆ. ಮೊಗಳ್ಳಿ ಗಣೇಶ್ ಅವರ ಸಂದರ್ಶನದೊಂದಿಗೆ 'ಗಾಂಧೀಜೀ–ಕಲೆ' ಬರಹವನ್ನು ಅಂತಃಪಠ್ಯದ ರೂಪದಲ್ಲಿ ಓದಿಕೊಳ್ಳಬಹುದಾಗಿದೆ. ಸಾಹಿತ್ಯ ಮತ್ತು ಕಲೆ, ಸಾಹಿತ್ಯದಲ್ಲಿ ಇರಬೇಕಾದ ಕಲೆ, ಬದುಕು ಮತ್ತು ಕಲೆ, ಇದೆಲ್ಲದರ ಬಗ್ಗೆ ಯೋಚಿಸಲು ಇವೆರಡು ಬರಹಗಳು ಪ್ರೇರಣೆ ನೀಡುವಂತಿವೆ. ಈ ಸಂಚಿಕೆಯಲ್ಲಿರುವ ಆರ್ದ್ರ ಕಥೆ, ಕವಿತೆ ಹಾಗೂ ಪ್ರಬಂಧಗಳು ಕೂಡ ವರ್ತಮಾನಕ್ಕೆ ಬರಹಗಾರರ ಸ್ಪಂದನ ಹಾಗೂ ಆ ಸ್ಪಂದನಗಳನ್ನು ಕಲೆಯಾಗಿಸುವ ತುಡಿತದ ಅಭಿವ್ಯಕ್ತಿಗಳಾಗಿವೆ ಎನ್ನುವುದನ್ನು 'ಮಯೂರದ ಓದುಗರು' ಗುರ್ತಿಸಬಹುದು.

**ಮಯೂರ ಬಳಗ**
editormy@mayura.co.in